ತಿಳಿಸಬೇಕು. ಸುಮ್ಮನೆ ಆಶ್ವಾಸನೆ ಕೊಟ್ಟುಕೊಂಡು ಬಂದಿರುವುದರಿಂದ ಅವರು ಇದೇ ಕೆಲಸವನ್ನೇ ನಂಬಿ ಕುಳಿತಿದ್ದಾರೆ. ಅವರೆಲ್ಲರೂ ತುಂಬಾ ಬಡವರು. ಈ ಬಡ ಜನರ ಬೇಡಿಕೆಯನ್ನು ಈಡೇರಿಸಿ ಅವರನ್ನು ಕೂಡಲೇ ಕೆಲಸದ ಮೇಲೆ ತೆಗೆದುಕೊಳ್ಳುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ವೀರಣ್ಣ.—ಈ ವಿಚಾರದ ಬಗ್ಗೆ ಹಿಂದಿನ ಅಧಿವೇಶನದಲ್ಲಿ ಪ್ರಶ್ನೆ ಬಂದಿತ್ತು, ಈಗಲೇ ಉತ್ತರಿಸಿದ್ದೇನೆ. ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದೆಂಬ ಪ್ರಶ್ನೆ ಇಲ್ಲ. ಅವರನ್ನು ತೆಗೆದು ಕೊಳ್ಳಲಿಕ್ಕೆ ಕಾರ್ಪೊರೇಷನ್ನಿಗೆ ಏನು ಬಾಧಕ ಇದೆ ಎಂದರೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ಅಂಡ್ ರೂಲ್ಸ್‌ನ್ನು ಅಮೆಂಡ್ ಮಾಡಬೇಕಾಗಿದೆ. ಅದಕ್ಕೆ ಸೂಚನೆ ಕೊಟ್ಟಿದ್ದೇವೆ, ಮಾಡುತ್ತಿದ್ದಾರೆ ಯಾರ್ಯಾರಿಗೆ ಎಲಿಜಿಬಿಲಿಟಿ ಬರುತ್ತದೆ ಆವರ ಅನುಕೂಲಕ್ಕೋಸ್ಕರ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡಬೇಕೆಂದಿರುವುದು. ಉದಾಹರಣೆಗೆ ಒಬ್ಬ ಡ್ರೈವರ್ ಇರುತ್ತಾನೆ, ಅವನಿಗೆ ೫೦ ವರ್ಷ ಆಗಿರುತ್ತದೆ. ಅಂಥವರಿಗೆ ಮಾನವೀಯತೆಯ ದೃಷ್ಟಿಯಿಂದ ಕೆಲಸ ಕೊಡ ಬೇಕಾಗುತ್ತದೆ. ಅಂಥವರಿಗೆ ಅನುಕೂಲವಾಗಲಿ ಎಂದು ಅಮೆಂಡ್‌ಮೆಂಟ್ ಮಾಡುತ್ತಿದ್ದೇವೆ. ೨-೩ ತಿಂಗಳೊಳಗೆ ರೂಲ್ಸ್ ಅಮೆಂಡ್‌ಮೆಂಟ್ ಮಾಡಿ ಯಾರ್ಯಾರಿಗೆ ಎಲಿಜಿಬಿಲಿಟಿ ಇದೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಲಿಕ್ಕೆ ಸೂಚನೆ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

(೮) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಟೋರಿಕ್ಷಾ ಪರವಾನಿಗೆಯನ್ನು ನಿಲ್ಲಿಸಿರುವುದು

ಶ್ರೀಮತಿ ಮನೋರಮಾ ಮಧ್ವರಾಜ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಿಕ್ಷಾ ನಡೆಸಲು ಹೊಸ ಪರ್ಮಿಟ್ ಕೊಡುವುದನ್ನು ಸುಮಾರು ಒಂದು ವರ್ಷದಿಂದ ನಿಲ್ಲಿಸಲಾಗಿದೆ. ಇದರಿಂದಾಗಿ ಅನೇಕ ಮಂದಿ ಬಡ ನಿರುದ್ಯೋಗಿಗಳು, ಶಾಲೆಸೆ ಕೆಲಸ ಬಲ್ಲ ಪರಿಶಿಷ್ಟ ಜಾತಿ-ವರ್ಗಗಳ ಯುವಕರು ಬ್ಯಾಂಕ್ ಸಾಲ ಮಂಜೂರಾಗಿದ್ದರೂ ಸಹ ರಿಕ್ಷಾ ಪರ್ಮಿಟ್ ಸಿಗದೇ ತೊಂದರೆಗೀಡಾಗಿದ್ದಾರೆ. ಜಿಲ್ಲಾ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರನ್ನು ಈ ವಿಚಾರದಲ್ಲಿ ವಿಚಾರಿಸಿದಾಗ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಮೂಲಕ ಸರ್ವೆ ನಡೆಸಲಾಯಿತು. ಅಗತ್ಯತೆ-ಅರ್ಹತೆ ಉಂಟೆಂದು ಅನೇಕ ಕಡೆ ಕಂಡುಬಂದರೂ, ಈ ವಿಚಾರವನ್ನು ನಾವೇ ತಾರೀಖು ೧೩-೧೨-೮೬ರಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಎದುರು ಸಾರ್ವಜನಿಕ ಅಹವಾಲು ಕೇಳುವ ವೇಳೆಯಲ್ಲಿ ಹಾಜರಿದ್ದು ಒತ್ತಾಯಿಸಿದ್ದರೂ, ಸಂಬಂಧಪಟ್ಟವರು ಯಾವುದೇ ಬೆಲೆ ನೀಡಿಲ್ಲ. ಪರಿಣಾಮವಾಗಿ ಹಳೇ ರಿಕ್ಷಾ ಪರ್ಮಿಟ್‌ಗಳು ಕಾಳಸಂತೆಯಲ್ಲಿ ವಿಪರೀತ ಬೆಲೆಯಲ್ಲಿ ವರ್ಗಾವಣೆಯಾಗಲ್ಪಡುತ್ತಿವೆ ಎಂಬ ದೂರು ಕೇಳಿಬರುತ್ತಿದೆ. ಸರ್ಕಾರ ಇನ್ನಾದರೂ ಎಚ್ಚೆತ್ತು ಕಾಳಸಂತೆಗೆ ಕಡಿವಾಣ ಹಾಕಿ, ನಿರುದ್ಯೋಗಿಗಳಿಗೆ ಪರ್ಮಿಟ್ ನೀಡಿ, ಹೊಸ ಬದುಕು ಬಾಳಲು ಪ್ರೋತ್ಸಾಹಿಸುವುದೇ, ಪ್ರಯಾಣಿಕರಿಗೆ ಜಿಲ್ಲೆಯ ಎಲ್ಲೆಡೆ ಬೇಕಾದ ಸೌಲಭ್ಯ ಕಲ್ಪಿಸಲು ನೆರವಾಗುವುದೇ ಎಂದು ತಿಳಿಯಬಯಸುತ್ತೇನೆ.

ಶ್ರೀ ವೀರಣ್ಣ (ಸಣ್ಣ ಉಳಿತಾಯ ಮತ್ತು ಸಾರಿಗೆ ಸಚಿವರು).—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಿರುವುದಕ್ಕಿಂತ ಹೆಚ್ಚಿಗೆ ಹೊಸ ಆಟೋರಿಕ್ಷಾ ಪರಮಿಟ್‌ಗಳನ್ನು ಕೊಡುವುದನ್ನು ದಿನಾಂಕ ೨೧-೮-೧೯೮೫ ರಿಂದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ನಿಲ್ಲಿಸಿರುತ್ತೆ. ಆದಾಗ್ಯೂ ದಿನಾಂಕ ೧೧-೭-೧೯೮೬ ರಂದು ಬೆಳ್ತಂಗಡಿ ತಾಲ್ಲೂಕು ಪೂಂಜಲುಕಟ್ಟೆಗೆ ೧೦ ಹೊಸ ಆಟೋರಿಕ್ಷಾ ಪರಮಿಟ್ ಗಳನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಕೊಟ್ಟಿರುತ್ತದೆ. ದಕ್ಷಿಣ ಕನ್ನಡದ ನಗರ ಮತ್ತು ಪಟ್ಟಣಗಳ ಪ್ರದೇಶಗಳಲ್ಲಿ ಜನಸಂಖ್ಯೆಯನ್ನು ಅನುಸರಿಸಿ ಹಾಗೂ ಟ್ಯಾಕ್ಸಿ ಮತ್ತು ಇತರೆ ವಾಹನ ಸೌಕರ್ಯಗಳನ್ನು ಅನುಸರಿಸಿ ಆಟೋರಿಕ್ಷಾ ಸಂಖ್ಯೆಯನ್ನು ದಕ್ಷಿಣ ಕನ್ನಡದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಈ ಕೆಳಕಂಡಂತೆ ನಿಗದಿಪಡಿಸಿರುತ್ತದೆ.

ಉಡುಪಿ	:	೧೩೨೩
ಕಾರ್ಕಳ	:	೩೩೭
ಕುಂದಾಪುರ	:	೩೦೦
ಮಂಗಳೂರು	:	೧೩೫೦
ಪುತ್ತೂರು	:	೪೯೧
ಬೆಳ್ತಂಗಡಿ	:	೨೭೦
ಸುಳ್ಯ	:	೧೪೪

ಬಂಟ್ವಾಳ್		
ಮತ್ತು ವಿಟ್ಲ	:	೩೯೮
ಸುರತ್ಕಲ್	:	೩೫೧
ಮುಲ್ಕಿ	:	೨೧೨
ಬಜ್ಪೆ	:	೬೨
ಕೈಕಂಬ	:	೪೪
ಪುಂಜಾಲಕಟ್ಟೆ	:	೧೦

ಈಗ ಇರುವ ಆಟೋರಿಕ್ಷಾಗಳಿಗೆ ಸಾಕಷ್ಟು ಪ್ರಯಾಣಿಕರು ಇಲ್ಲದಿರುವುದರಿಂದ ಹೊಸ ಆಟೋರಿಕ್ಷಾಗಳಿಗೆ ಅವಶ್ಯಕತೆ ಇಲ್ಲವೆಂಬುದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಭಿಪ್ರಾಯ.

ಈ ಪ್ರದೇಶದ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲು ಹೊಸ ಪರವಾನಿಗೆಗಳನ್ನು ಕೊಡುವು ದಾದರೆ ಈ ಹಾಲಿ ಆಟೋರಿಕ್ಷಾಗಳ ಉದ್ಯೋಗದಲ್ಲಿರುವ ಮಾಲೀಕರಿಗೆ ನಷ್ಟವಾಗಿ ನಿರುದ್ಯೋಗಿಗಳಾಗ ಬಹುದು. ಯಾವ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವಾದರೂ ಈಗ ಹಾಲಿ ಇರುವ ಆಟೋರಿಕ್ಷಾಗಳು ಸ್ವಲ್ಪ ಮಟ್ಟಿಗಾದರೂ ಅಂದರೆ ಮಾಲೀಕರು ಹಾಗೂ ಚಾಲಕರು ಅದರಿಂದ ಜೀವನ ನಡೆಸುವುದಕ್ಕೆ ಆಗುವಷ್ಟಾದರೂ ಲಾಭ ಗಳಿಸುವಂತೆ ನೋಡಿಕೊಳ್ಳುವುದು ಪ್ರಾಧಿಕಾರದ ಆದ್ಯ ಕರ್ತವ್ಯ. ಬ್ಯಾಂಕ್‌ಗಳು ಸಾಲ ಕೊಡುತ್ತವೆ ಎಂದು ಹಾಗೂ ನಿರುದ್ಯೋಗವನ್ನು ನೀಗಿಸಲೆಂದು ಪರವಾನಿಗೆಗಳನ್ನು ಕೊಡಲು ಆಗುವುದಿಲ್ಲ. ಪರವಾನಿಗೆಗಳನ್ನು ಕೊಡಬೇಕಾದರೆ ಈಗ ಹಾಲಿ ಇರುವ ಆಟೋರಿಕ್ಷಾಗಳ ಮಾಲೀಕರ ಅಭಿಪ್ರಾಯವನ್ನು ಪರಿಗಣಿಸಲೇಕು. ಇಲ್ಲಿ ಮಾಲೀಕರು ಚಾಲಕರು ಅನೇಕ ಸಂಘಸಂಸ್ಥೆಗಳು ಪರಿವಾನಿಗೆಗಳನ್ನು ಹೆಚ್ಚಿಸುವುದನ್ನು ಉಗ್ರವಾಗಿ ವಿರೋಧಿಸುತ್ತಿರುವುದರಿಂದ ಹೊಸ ಪರವಾನಿಗೆ ಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾಗಲೀ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರಾಗಲೀ, ಸಾರಿಗೆ ಆಯುಕ್ತರಾಗಲೀ, ಸರ್ಕಾರವಾಗಲೀ, ಈಗಿರುವ ಕಾನೂನಿನ ಚೌಕಟ್ಟಿನಲ್ಲಿ ಪರವಾನಿಗೆಗಳನ್ನು ಹೆಚ್ಚಿಸಲು ಅಧಿಕಾರ ಹೊಂದಿಲ್ಲ. ಈ ಅಧಿಕಾರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಮಾತ್ರ ಇದೆ. ಈ ಪ್ರಾಧಿಕಾರ ನ್ಯಾಯಿಕ ಸ್ವರೂಪದ್ದು ಕಾಲಸಂತೆಯಲ್ಲಿ ಪರವಾನಿಗೆಗಳನ್ನು ಮಾಡಿಕೊಳ್ಳುವುದನ್ನು ಕಂಡುಹಿಡಿಯುವುದು ಬಹಳ ಕಷ್ಟಸಾಧ್ಯವಾಗಿದೆ. ಅದಕ್ಕೆ ನಿಖರವಾದ ಪ್ರಕರಣಗಳಲ್ಲಿ ಪುರಾವೆಗಳನ್ನು ಕೊಡುವುದಾದರೆ ಅಂಥವರ ಪರವಾನಿಗೆಗಳನ್ನು ರದ್ದುಪಡಿಸಿ ಅರ್ಹರಾದವರಿಗೆ ಪರವಾನಿಗೆಗಳನ್ನು ಕೊಡುವುದಕ್ಕೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಅಧಿಕಾರ ಇದೆ. ಅಂಥಹ ನಿಖರವಾದ ಅಪರಾಧಿಗಳು ಇದ್ದಲ್ಲಿ ಯಾರು ಬೇಕಾದರೂ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಪುರಾವೆಗಳನ್ನು ಒದಗಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಕೇಳಿಬಹುದು. ದಿನಾಂಕ ೧೭-೧೧-೧೯೮೬ರಂದು ಮಾನ್ಯ ಶಾಸಕರುಗಳು ಆರ್.ಟಿ.ಎ. ಪಬ್ಲಿಕ್ ಗ್ರಿವೆನ್ಸನ ಸಭೆಗೆ ಹಾಜರಾಗಿ ಆಟೋರಿಕ್ಷಾ ಪರಮಿಟ್ ಕೊಡಲು ಒತ್ತಾಯಿಸಿದ ಹಿನ್ನೆಲೆಯಲ್ಲಿ ಆರ್.ಟಿ.ಎ. ಪ್ರಾಧಿಕಾರದ ಅಧಿಕಾರಿಗಳಿಗೆ ಮಂಗಳೂರು ಪಟ್ಟಣವನ್ನು ಬಿಟ್ಟು ಜಿಲ್ಲೆಯ ಇತರ ಪಟ್ಟಣಗಳಿಗೆ ಎಷ್ಟು ಆಟೋರಿಕ್ಷಾಗಳಿಗೆ ಪರಮಿಟ್‌ಗಳನ್ನು ಮಂಜೂರು ಮಾಡಬಹುದು ಎನ್ನುವುದನ್ನು ಸರ್ವೆ ನಡೆಸಲು ತಿಳಿಸಿದ್ದಾರೆ. ಈ ಸರ್ವೆ ಕಾರ್ಯ ಮುಂದುವರಿದಿದ್ದು ಮುಂದಿನ ಆರ್.ಟಿ.ಎ. ಸಭೆಯಲ್ಲಿ ಮಂಗಳೂರನ್ನು ಬಿಟ್ಟು ಜಿಲ್ಲೆಯ ಇತರ ಪಟ್ಟಣಗಳಿಗೆ ಎಷ್ಟು ಆಟೋ ಪರಮಿಟ್‌ಗಳನ್ನು ಕೊಡಲಾಗುವುದು. ಪರಮಿಟ್‌ಗಳನ್ನು ಕೊಡುವಾಗ ನಿರುದ್ಯೋಗಿಗಳಿಗೆ, ಪರಿಶಿಷ್ಟ ಜಾತಿಯವರಿಗೆ ಮತ್ತು ಪರಿಶಿಷ್ಟ ಪಂಗಡದವರಿಗೆ ಆದ್ಯತೆ ನೀಡಲಾಗುವುದು. ಈಗ ಸಧ್ಯಕ್ಕೆ ಆರ್.ಟಿ.ಎ. ಮುಂದೆ ಯಾವ ಅರ್ಜಿಗಳೂ ಆಟೋರಿಕ್ಷಾ ಪರಮಿಟ್‌ಗಳ ಮಂಜೂರಾತಿಗೆ ಇತ್ಯರ್ಥವಾಗದೇ ಬಾಕಿ ಇರುವುದಿಲ್ಲ. ಇನ್ನು ಎರಡು ತಿಂಗಳಲ್ಲಿ ಮಂಗಳೂರನ್ನು ಬಿಟ್ಟು ಜಿಲ್ಲೆಯ ಇತರೆ ಪಟ್ಟಣಗಳಿಗೆ ಆಟೋರಿಕ್ಷಾ ಪರಮಿಟ್‌ಗಳನ್ನು ಮಂಜೂರು ಮಾಡಲಾಗುವುದು ಎಂದು ದಕ್ಷಿಣ ಕನ್ನಡ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ವರದಿಯಾಗಿದೆ. ಆದರೂ ಸರಕಾರವು ಈ ಬಗ್ಗೆ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಆದೇಶ ನೀಡಿ ದಕ್ಷಿಣ ಕನ್ನಡ ಸಾರಿಗೆ ಪ್ರಾಧಿಕಾರಕ್ಕೆ ಸೂಕ್ತವಾದ ಸೂಚನೆಗಳನ್ನು ಕೊಟ್ಟು ಆದಷ್ಟು ಮಟ್ಟಿಗೆ ನಿರುದ್ಯೋಗಿಗಳಿಗೆ ಪರವಾನಗಿಗಳನ್ನು ಕೊಡುವಂತೆ ಸೂಚಿಸಲಾಗುವುದು.

ಶ್ರೀ ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೆ ಸುಳ್ಯ ತಾಲ್ಲೂಕಿನ ದೇವಚಳ್ಳ ಗ್ರಾಮದಲ್ಲಿ ವಾಸ್ತವಿಸಿಕೊಂಡು ಬರುವ ಕೆಲವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಡಿ.ಸಿ. ಮನ್ನಾ ದರಖಾಸ್ತು ಮಂಜೂರಾದ ಸ್ಥಳವಿರುತ್ತದೆ. ಈ ಪೈಕಿ ಶ್ರೀ ರಾಮಣ್ಣ ಮಲೆಕುಡಿಯ ಎಂಬುವರಿಗೆ ಡಿಸಿಡಿಆರ್-೧-ಎಲ್ಎ-೮೫ರಂತೆ ದರಖಾಸ್ತು ಮಂಜೂರಾಗಿದ್ದು ಈ ಸ್ಥಳವನ್ನು ೧೯೮೬-೮೫ನೇ ಇಸವಿ

ಯಿಂದ ಗಡಿ ವಿಂಗಡಿಸಿಕೊಡಲು ಸರ್ವೆ ಇಲಾಖೆಯಿಂದ ದ್ವಿತೀಯ ದರ್ಜೆ ಸರ್ವೆಯರಾದ ಶ್ರೀ ಟಿ. ನಾಗಪ್ಪ ಗಿಡ ಎಂಬುವರಿಗೆ ಪಹಿಸಿಕೊಡಲಾಗಿದೆ. ೧೯೪೪-೪೫ ರಿಂದ ಈ ಕಡತವನ್ನು ಈ ದರಖಾಸ್ತುದಾರರೆ ಲಗ್ಗಿಯ ಭೂ ಮಾಲೀಕರ ಪರವಾಗಿ ದರಖಾಸ್ತು ಸ್ಥಳದ ಜಮಿನಿನ ದೃಶ್ಯವನ್ನು ಬದಲಾಯಿಸುವ ಉದ್ದೇಶದಿಂದ ತಿಂಗಳಲ್ಲಿ ೨ ಸಲ ಅಳತೆ ಕೆಲಸ ಮಾಡುತ್ತಿದ್ದಾರೆ. ಆದರೂ ಈತನಕ ದರಖಾಸ್ತು ಕಡತವನ್ನು ಅಳತೆ ಕೆಲಸ ಪೂರೈಸಿ ಮುಗಿಸಿರುವುದಿಲ್ಲ. ಲಗ್ಗ ಜಮಿನುದಾರರು ಈ ಡಿ.ಸಿ. ಮನ್ನಾ ದರಖಾಸ್ತುದಾರರಿಗೆ ಕಳೆದ ೨ ವರ್ಷಗಳಿಂದ ಕಿರುಕುಳ ಕೊಡುತ್ತಿದ್ದಾರೆ. ಅಲ್ಲದೆ ಕಳೆದ ಒಂದು ತಿಂಗಳ ಹಿಂದೆ ಬಡ ದರಖಾಸ್ತುದಾರರು ಹತ್ತಿರದ ಆರಕ್ಷಕ ಠಾಣೆ ಅಧಿಕಾರಿಯವರಿಗೆ ದೂರು ಕೊಟ್ಟರೂ ತಿಂಗಳುಗಟ್ಟಲೆ ಇದರ ವಿಚಾರಣೆಗೆ ಕ್ರಮ ಕೈಗೊಂಡಿರುವುದಿಲ್ಲ. ಅಲ್ಲದೇ ಈ ಡಿ.ಸಿ. ಮನ್ನಾ ಸ್ಥಳದ ಲಗ್ಗ ಜಮಿನುದಾರ ಮಾಲೀಕರು ಈ ಸ್ಥಳದ ಮಧ್ಯದಲ್ಲಿ ನೀರಿನ ತೋಡಿಗೆ ಕಟ್ಟೆ ಕಟ್ಟಿ ಆತಂಕಿಸುವುದು, ಡಿ.ಸಿ. ಮನ್ನಾ ಸ್ಥಳದಲ್ಲಿ ಬೆಳೆಸಿರುವ ಬಿದಿರನ್ನು ಬಲಾತ್ಕಾರವಾಗಿ ಕಡಿದು ಮಾರಾಟ ಮಾಡಲು ಹೊರಟಿರುವರು. ಹೀಗಿದ್ದರೂ ಬಡ ದರಖಾಸ್ತುದಾರನಿಗೆ ನ್ಯಾಯ ದೊರಕಿಸಲಾಗಿಲ್ಲ. ಅಲ್ಲದೆ ಸದ್ರಿ ದ್ವಿತೀಯ ದರ್ಜೆ ಸರ್ವೆಯರ ಮೇಲೆ ಹಲವಾರು ಸಾರ್ವಜನಿಕರ ದೂರುಗಳು ಇದ್ದರೂ ಇಲಾಖೆ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ ಈ ಪ್ರಕರಣದ ಕುರಿತು ಸೂಕ್ತ ಕ್ರಮ ಕೈಗೊಂಡು ನ್ಯಾಯ ಒದಗಿಸುವಂತೆ ಒತ್ತಾಯಿಸುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಮೀನುಗಾರಿಕಾ ಮಂತ್ರಿಯವರು).—ದಕ್ಷಿಣ ಕನ್ನಡದ ಕಡಲಲ್ಲಿ ಈ ವರ್ಷ ಹಿಂದೆಂದೂ ಇಲ್ಲದಂತಹ ಭೀಕರ ವಿಮಾನಿನ ಕ್ಷಾಮದಿಂದಾಗಿ ವಿಮಾನುಗಾರಿಕೆಯು ಕಸುಬೇ ಜೀವನಾಧಾರವಾಗಿರುವ ಸಹಸ್ರಾರು ಮಂದಿ ಬಡವರು ಅಂತ್ಯಂತ ಕಂಗಾಲು ಸ್ಥಿತಿಯಲ್ಲಿದ್ದಾರೆ. ಬೇರೆ ಬೇರೆ ಜಾತಿ, ವರ್ಗ, ಜನಾಂಗದ ಜನ ಈ ಕಸುಬಿನಲ್ಲಿ ಉದ್ಯುಕ್ತರಾಗಿದ್ದು ಅದರಲ್ಲೂ ಜೀವನ ಹಂಗು ತೊರೆದು ಕಡಲಲ್ಲಿ ದುಡಿಯುವ ಬಡವರು, ತಲೆಯ ಮೇಲೆ ಬಟ್ಟೆ ಹೊತ್ತು ಹತ್ತಾರು ಮೈಲಿ ನಡೆದು ವಿಮಾನು ಮಾರಿ ಬಂದ ಸಂಪಾದನೆಯಿಂದ ಸಂಜೆಯ ಗಂಜಿ ತಿನ್ನಬೇಕಾದ ಹೆಣ್ಣುಮಕ್ಕಳು – ಇವರ ಕಡೆಗೆ ಸರ್ಕಾರ ಕಣ್ಣು ತೆರೆಯದೆ ಲಕ್ಷಾಂತರ ರೂಪಾಯಿಗಳನ್ನು ಒಳನಾಡು ವಿಮಾನುಗಾರಿಕೆಗೆ ವ್ಯಯಿಸುತ್ತಿರುವುದು, ನೀರಿಲ್ಲದ ಜಾಗದಲ್ಲಿ ಹೊಸ ಕೆರೆ ಕಟ್ಟಿಸಿ, ನೀರು ತುಂಬಿಸಿ, ವಿಮಾನು ಸಾಕುವ ಪ್ರಯತ್ನ ಮಾಡುತ್ತಿರುವುದು ಅತ್ಯಂತ ಹಾಸ್ಯಾಸ್ಪದ. ನಿಸರ್ಗದತ್ತವಾದ ಸಾಗರದಡಿಯಲ್ಲಿ ಕಡಿಮೆ ವೆಚ್ಚದಲ್ಲಿ ಆಗಬಹುದಾದ ಮತ್ಸ್ಯವರ್ಧನೆಗೆ ಸರ್ಕಾರ ಯಾವುದಾದರೂ ವೈಜ್ಞಾನಿಕ ಪ್ರಯೋಗ ನಡೆಸುವುದೇ ತಾತ್ಪರ್ತಿಕವಾಗಿ ಈ ವರ್ಷ ಕರಾವಳಿಯ ಬಡ ವಿಮಾನುಗಾರರಿಗೆ ಜೀವನ ನಿರ್ವಹಣೆಗಾಗಿ ಅಗತ್ಯವಾದ ಆರ್ಥಿಕ ನೆರವು ನೀಡುವುದೇ ಎಂದು ತಿಳಿಯಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಈ ಋತುವಿನ ವಿಮಾನ ಉತ್ಪಾದನೆಯನ್ನು ಪರಿಗಣಿಸುವಾಗ ಈ ವರ್ಷ ಹಿಂದೆಂದೂ ಇಲ್ಲದಂತ ಭೀಕರ ವಿಮಾನಿನ, ಕ್ಷಾಮವು ಉದ್ಭವಿಸಿರುವುದೆಂದು ಹೇಳುವುದು ಸಾಧುವಲ್ಲ. ಈ ವರ್ಷದ ಏಪ್ರಿಲ್ ೧೯೬೬ ರಿಂದ ಡಿಸೆಂಬರ್ ೬೬ರ ತನಕ ಸಾಧಾರಣ ೯೯೦೩ ಟನ್ ವಿಮಾನನ್ನು ಹಿಡಿದು ಸಾಧಾರಣ ೨೫.೧೧ ಕೋಟಿ ರೂಪಾಯಿಗಳನ್ನು ಗಳಿಸಲಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಅಂದರೆ ಏಪ್ರಿಲ್ ೬೫ ರಿಂದ ಡಿಸೆಂಬರ್ ೬೫ರ ತನಕ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಸಾಧಾರಣ ೧,೧೦,೨೦೦ ಟನ್ ವಿಮಾನನ್ನು ಹಿಡಿದು ಸಾಧಾರಣ ೨೫.೪ ಕೋಟಿ ರೂಪಾಯಿಗಳನ್ನು ಗಳಿಸಲಾಗಿದೆ. ಈ ಬಾರಿ ಸಾಧಾರಣ ೧೧೨೭ ಟನ್ ವಿಮಾನು ಉತ್ಪಾದನೆಯು ಕಡಿಮೆಯಾಗಿದ್ದರೂ ಕೂಡ ಈ ಕಡಿಮೆ ವಿಮಾನನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿರುವುದರಿಂದ ಮೌಲ್ಯವು ಸಾಧಾರಣ ಕಳೆದ ವರ್ಷದಷ್ಟೇ ಆಗಿರುವುದು. ಹೀಗಾಗಿ ಇದುವರೆಗಿನ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿನ ವಿಮಾನುಗಾರಿಕೆಯನ್ನು ಹೋಲಿಸಿದಾಗ ಹಿಂದೆಂದೂ ಬಾರದಂತ ಭೀಕರ ವಿಮಾನಿನ ಕ್ಷಾಮವು ಒದಗಿ ಬಂದಿರುವುದೆಂದು ಹೇಳುವುದು ಸಮಂಜಸವಲ್ಲ.

ಪ್ರಕೃತ ಈ ವರ್ಷದಲ್ಲಿ ಪರ್ಸಿನ್ ದೋಣಿಗೆ ಸಾಧಾರಣ ನವೆಂಬರ್ ೬ರ ತನಕ ಹೆಚ್ಚು ವಿಮಾನು ಉತ್ಪಾದನೆಯಾಗಿರುವುದು. ಆದರೆ ಟ್ರಾಲರ್ ದೋಣಿಗಳಿಗೆ ಈ ಸಮಯದಲ್ಲಿ ಯಾವದೊಂದು ಉತ್ಪಾದನೆ ಇಲ್ಲದಿದ್ದರೂ ಕೂಡ ಈಗ ಅಂದರೆ ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ವಿಮಾನಿನ ಉತ್ಪಾದನೆಯಲ್ಲಿ ಅಭಿವೃದ್ಧಿಯು ಕಂಡುಬರುತ್ತಿದೆ. ಗಿಲ್ ನೆಟ್‌ಸ್ ಉಪಯೋಗಿಸುತ್ತಿರುವ ವಿಮಾನುಗಾರರಿಗೆ ಇದುವರೆವಿಗೂ ಸಾಧಾರಣ ಸಂಪಾದನೆಯಾಗಿರುತ್ತದೆ, ಆದರೆ ಸಾಂಪ್ರದಾಯಿಕ ವಿಮಾನುಗಾರಿಕೆಯನ್ನು ಮಾಡುತ್ತಿರುವ ವಿಮಾನುಗಾರರ ಸಂಪಾದನೆಯು ಅಷ್ಟೊಂದು ಉತ್ತೇಜನಕಾರಿಯಾಗಿಲ್ಲ. ಆವರ ವಿಮಾನಿನ ಉತ್ಪಾದನೆ ಮತ್ತು ಸಂಪಾದನೆಯು ಇನ್ನು ಬರುವ ತಿಂಗಳುಗಳಲ್ಲಿ ಪರಿಶೀಲಿಸಬಹುದಾಗಿದೆ.

ಸರ್ಕಾರವು ಒಳನಾಡು ಮೀನುಗಾರಿಕೆಗೆ ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸುತ್ತಿರುವುದು ಹಾಸ್ಯಾಸ್ಪದವೆಂದು ಹೇಳುವುದು ಸರಿಯಲ್ಲ ಮತ್ತು ಅತಿಶಯೋಕ್ತಿಯೆಂದು ಹೇಳಬಯಸುವೆನು. ಒಳನಾಡು ಮೀನುಗಾರಿಕೆಯು ಕೂಡ ಕರಾವಳಿಯ ಮೀನುಗಾರಿಕೆಯಷ್ಟೆ ಪ್ರಾಮುಖ್ಯತೆಯನ್ನು ಪಡೆದಿದೆ. ಒಳನಾಡು ಮೀನುಗಾರಿಕೆಗೆ ಕೂಡ ಕರಾವಳಿಯ ಮೀನುಗಾರಿಕೆಯಷ್ಟೇ ಸಹಾಯವನ್ನು ಮತ್ತು ತಕ್ಕುದಾದ ಯೋಜನೆಗಳನ್ನು ನಿರೂಪಿಸಿ ಮೀನಿನ ಉತ್ಪಾದನೆಯನ್ನು ವೃದ್ಧಿಪಡಿಸುವುದು ಅತ್ಯವಶ್ಯಕವಾಗಿದೆ. ಒಳನಾಡು ಮೀನುಗಾರಿಕೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕಾರ್ಯಚರಣೆಗೆ ತರಬೇಕಾಗಿರುವುದು. ನಮ್ಮ ರಾಜ್ಯದಲ್ಲಿ ಹಲವಾರು ಜಲಾಶಯಗಳು, ನದಿಗಳು ಕೆರೆಗಳು ಮತ್ತು ಕುಂಟೆಗಳು ಮೀನುಗಾರಿಕಾ ಅಭಿವೃದ್ಧಿಗೆ ಲಭ್ಯವಿರುವುದರಿಂದ ತಕ್ಕುದಾದ ಒಳನಾಡು ಮೀನುಗಾರಿಕಾ ಯೋಜನೆಗಳನ್ನು ರೂಪಿಸುವುದು ಸರ್ಕಾರದ ಕರ್ತವ್ಯ. ಇದೂ ಅಲ್ಲದೆ ಒಳನಾಡು ಮೀನುಗಾರರು ಕರಾವಳಿಯ ಮೀನುಗಾರರಿಗಿಂತ ತುಂಬ ಬಡತನದಲ್ಲಿರುವರೆಂದು ತಿಳಿಸಬಯಸುವೆನು.

ವೈಜ್ಞಾನಿಕ ಮತ್ಸ್ಯ ಸಂವರ್ಧನೆ ಪ್ರಾಯೋಗವನ್ನು ನಡೆಸಲು ಸರ್ಕಾರವು ಈಗಾಗಲೇ ಸೆಂಟ್ರಲ್ ಮೆರೀನ್ ರೀಸರ್ಚ್ ಇನ್‌ಸಟ್ಯೂಟ್ ಇವರೊಡನೆ ಮಾತುಕತೆಗಳನ್ನು ನಡೆಸುತ್ತಿರುವುದು. ಈ ಮಾತುಕತೆಗಳು ಫಲಪ್ರದವಾಯಕಾವಾಗಿ ಕಂಡುಬಂದಲ್ಲಿ ಪ್ರಯೋಗವನ್ನು ನಡೆಸಲು ಸರ್ಕಾರವು ಬದ್ಧವಾಗಿರುವುದೆಂದು ತಿಳಿಸಬಯಸುವೆನು.

ಹೀಗಿದ್ದರೂ ಕೂಡ ಈ ಋತುವಿನ ಉಳಿದ ತಿಂಗಳುಗಳ ಮೀನುಗಾರಿಕೆಯನ್ನು ಸಂಪೂರ್ಣವಾಗಿ ಪರಿಶೀಲಿಸಿ ಇನ್ನು ಬಾಕಿ ಉಳಿದ ತಿಂಗಳಿನ ಮೀನಿನ ಉತ್ಪಾದನೆಯನ್ನು ಪರಿಗಣಿಸಿ ಅಗತ್ಯ ಕಂಡುಬಂದಲ್ಲಿ ಮೀನುಗಾರರಿಗೆ ತಕ್ಕುದಾದ ಆರ್ಥಿಕ ನೆರವು ಕೊಡಲು ಸರ್ಕಾರವು ಪರಿಶೀಲಿಸಲಾಗುವುದೆಂದು ತಿಳಿಸಬಯಸುವೆನು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಎಲ್ಲ ವಿವರಗಳನ್ನು ಕೊಟ್ಟಿದ್ದಾರೆ. ಕೂಡಲೇ ಆ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ನೀಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೀಕರ ಮೀನಿನ ಕ್ಷಾಮ

ಶ್ರೀ ವಸಂತ ಸಾಲಿಯಾನ.—ದಕ್ಷಿಣ ಕನ್ನಡದ ಕಡಲಲ್ಲಿ ಈ ವರ್ಷ ಹಿಂದೆಂದೂ ಇಲ್ಲದಂತಹ ಭೀಕರ ಮೀನಿನ ಕ್ಷಾಮದಿಂದಾಗಿ ಮೀನುಗಾರಿಕೆಯು ತನುಬೇ ಜೀವನಾಧಾರವಾಗಿರುವ ಸಹಸ್ರಾರು ಮಂದಿ ಬಡವರು ಅತ್ಯಂತ ಕಂಗಾಲು ಸ್ಥಿತಿಯಲ್ಲಿದ್ದಾರೆ. ಬೇರೆ ಬೇರೆ ಜಾತಿ, ವರ್ಗ ಜನಾಂಗದ ಜನ ಈ ಕಸುಬಿನಲ್ಲಿ ಉದ್ಯುಕ್ತರಾಗಿದ್ದು ಆದರಲ್ಲೂ ಜೀವನದ ಹಂಗು ತೊರೆದು ಕಡಲಲ್ಲಿ ದುಡಿಯುವ ಬಡವರು, ತಲೆಯ ಮೇಲೆ ಬುಟ್ಟಿ ಹೊತ್ತು ಹತ್ತಾರು ಮೈಲಿ ನಡೆದು ಮೀನು ಮಾರಿ ಬಂದ ಸಂಪಾದನೆಯಿಂದ ಸಂಜೆಯ ಗಂಜಿ ತಿನ್ನಬೇಕಾದ ಹೆಣ್ಣು ಮಕ್ಕಳು ಇವರ ಕಡೆಗೆ ಸರಕಾರ ಕಣ್ಣು ತೆರೆಯದೆ ಲಕ್ಷಾಂತರ ರೂಪಾಯಿಗಳನ್ನು ಒಳನಾಡು ಮೀನುಗಾರಿಕೆ ವ್ಯಯಿಸುತ್ತಿರುವುದು. ನೀರಿಲ್ಲದ ಜಾಗದಲ್ಲಿ ಹೊಸ ಕೆರೆ ಕಟ್ಟಿಸಿ, ನೀರು ತುಂಬಿಸಿ, ಮೀನು ಸಾಕುವ ಪ್ರಯತ್ನ ಮಾಡುತ್ತಿರುವುದು ಅತ್ಯಂತ ಹಾಸ್ಯಾಸ್ಪದ. ನಿಸರ್ಗದತ್ತವಾದ ಸಾಗರ ತಡಿಯಲ್ಲಿ ಕಡಿಮೆ ಖರ್ಚಿನಲ್ಲಿ ಆಗಬಹುದಾದ ಮತ್ಸ್ಯವರ್ಧನೆಗೆ ಸರಕಾರ ಯಾವುದಾದರೂ ವೈಜ್ಞಾನಿಕ ಪ್ರಯೋಗ ನಡೆಸುವುದೇ ? ತಾತ್ಕಾಲಿಕವಾಗಿ ಈ ವರ್ಷ ಕರಾವಳಿಯ ಬಡ ಮೀನುಗಾರರಿಗೆ ಜೀವನ ನಿರ್ವಹಣೆಗಾಗಿ ಅಗತ್ಯವಾದ ಆರ್ಥಿಕ ನೆರವು ನೀಡುವುದೇ ಎಂದು ತಿಳಿಯಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆಬಗ್ಗೆ

ಶ್ರೀ ಬಿ. ಎಸ್. ಇದಿನಬ್ಬ.—ಅಧ್ಯಕ್ಷರೇ, ದಕ್ಷಿಣ ಕನ್ನಡದ ಉಳ್ಳಾಲದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಬಹಳ ವಿಶಾಲ ಪ್ರದೇಶಗಳಿಗೆ ಒಳಪಟ್ಟಿರುತ್ತದೆ. ಸುಮಾರು ಎರಡೂವರೆ ಲಕ್ಷ ಜನರು ಇದಕ್ಕೆ ಒಳಪಡುತ್ತಾರೆ. ಇದರಿಂದಾಗಿ ಬಹಳ ದೂರ ದೂರದ ಗ್ರಾಮಾಂತರ ಮೂಲೆ ಪ್ರದೇಶಗಳಿಗೆ ಆರೋಗ್ಯ ಸೌಲಭ್ಯ ಸರಿಯಾಗಿ ದೊರಕುವುದಿಲ್ಲ; ಮುಟ್ಟುವುದಿಲ್ಲ. ಈ ದೃಷ್ಟಿಯಲ್ಲಿ